ಅದು ಇಂದು ಪ್ರಕಟವಾಗಿ ಸ್ವಾಮೀಜಿಗಳ ಬಹುದಿನದ ಆಸೆ ಈಡೇರಿಕೆಗೆ ಒಂದೆರೆಡೇ ಹೆಜ್ಜೆ ಹಿಂದೆ ಎನ್ನುವಂತಾಗಿತ್ತು. ಈ ನಡುವೆ ಮಠದ ಆಡಳಿತಾಧಿಕಾರಿ ಹಿರಿಯ ಶ್ರೀಗಳಿಗೆ ತುಂಬ ಸನಿಹವಾಗಿರುವ ಮರುಳಪ್ಪನವರು ಮಠದೆಡೆಗೆ ಧಾವಿಸಿ ಬಂದರು. ಅವರನ್ನು ನೋಡಿದ್ದೆ ಕಿರಿಯ ಶ್ರೀಗಳಿಗೆ, 'ಈತನೆಲ್ಲಿ ನನ್ನ ಬಗ್ಗೆ ಭಕ್ತರಿಗೆ ಇಲ್ಲಸಲ್ಲದ್ದನ್ನ ಹೇಳಿ ಮಸಲತ್ತು ಮಾಡುತ್ತಾನೊ' ಎಂದು ದಿಗಿಲಿಕ್ಕಿಕೊಂಡಿತು. ಮರುಳಪ್ಪನವರು ಬಂದವರೆ, 'ಜಾಹೀರಾತು ನೋಡಿದೆ, ಒಳ್ಳೆಯದೇ ಆಯಿತು' ಎಂದು ಹೇಳಿ ಕೆಲಸ ನಿಮಿತ್ತ ಒಳಹೋದರು.

ಈ ನಡುವೆ ಶ್ರೀಗಳಿಗೆ ಟಿವಿ ನೋಡೋಣವೆನಿಸಿ, ಪತ್ರಿಕೆಯನ್ನು ಟಿಪಾಯ್ ಮೇಲೆ ಹಾಗೆ ಇಟ್ಟು ಅಲ್ಲೆ ಇದ್ದ ರಿಮೋಟ್ ಹಿಡಿದು ಆನ್ ಮಾಡಿದರು. ಟಿವಿ ಆನ್ ಆದ ತಕ್ಷಣ, 'ಬ್ರೇಕಿಂಗ್ ನೀವ್ಸ್, ಇದು ನಮ್ಮಲ್ಲಿ ಮಾತ್ರ' ಎಂದು ದಪ್ಪ ಅಕ್ಷರದಲ್ಲಿ ಕ್ಷಣಕ್ಷಣಕ್ಕು ಬಿತ್ತರವಾಗುತ್ತಿತ್ತು. ಅದರ ಹಿನ್ನೆಲೆಯಲ್ಲಿ ಬಿತ್ತಲಾಗಿರುವ ಕಾವಿಧಾರಿ ಸ್ವಾಮಿಯೊಬ್ಬ ಯುವತಿಯೊಂದಿಗೆ ಸರಸದಲ್ಲಿ ತೊಡಗಿರುವ ವಿಡಿಯೊ ತುಣುಕುಗಳು ಸರಿದು ಹೋಗುತ್ತಿದ್ದವು. ಅದಕ್ಕೆ ತಕ್ಕಂತೆ ನಿರೂಪಕ ದೊಡ್ಡ ಗಂಟಲಿನಲ್ಲಿ, 'ಇವನು ಕಾವಿಯೋ... ಕಾಮಿಯೋ...', 'ಕಾವಿ ವೇಷದಲ್ಲೊಬ್ಬ ಕಾಮಿ', 'ಕಾವಿಗೆ ಕಳಂಕ ತಂದ ಕಾಮಿ ಸ್ವಾಮಿ' ಇತ್ಯಾದಿಯಾಗಿ ಅರಚುತ್ತಿದ್ದ. ಇದನ್ನು ಕಂಡ ಕಿರಿಯ ಶ್ರೀಗಳ ಎದೆ ನಡುಗಿದಂತಾಗಿ ಜೋರಾಗಿ ಬಡಿದುಕೊಳ್ಳುತ್ತಿದ್ದ ಟಿವಿ ವಾಯ್ಸ್ ಕಡಿಮೆ ಮಾಡೋಣವೆಂದು ಯಾವ್ಯಾವುದೋ ಬಟನ್ ಒತ್ತತೊಡಗಿದರು. ಗಾಬರಿಗೆ ಅದು ಇನ್ನೂ ಜೋರಾಗುತ್ತಿತ್ತು. ಮತ್ತೊಂದು ಚಾನಲ್‌ಗೆ ಚೇಂಜ್ ಮಾಡಿದರು. ಅಲ್ಲಿ ಇನ್ನೊಂದಷ್ಟು ಆಳವಾದ ಮಾಹಿತಿ ಇತ್ತು. ಮಠದ ಚಿತ್ರಕಾರ್ತಿಯೆಂದು ನೇಮಿಸಿಕೊಂಡು ಅವಳೊಂದಿಗೆ ಸ್ವಾಮೀಜಿಯ ಲವ್ವಿ ಡವ್ವಿ ಇತ್ಯಾದಿ.

ಕಿರಿಯ ಶ್ರೀಗಳು ಸುಸ್ತಾದವರಂತೆ ಗೋಡೆಗೊರಗಿ ಕಣ್ಣು ಮುಚ್ಚಿದರು. ತುಸು ಹೊತ್ತು ಹಾಗೆ ಇದ್ದು ಯಾವುದೋ ಸಪ್ಪಳ ಕೇಳಿದಂತಾಗಿ ಕಣ್ಣು ತೆರೆದು ನೋಡಿದರು. ಹೆಬ್ಬಾಗಿಲಿನಿಂದ ಬರುತ್ತಿದ್ದ ಸೂರ್ಯಕಿರಣಗಳನ್ನು ಕದಡಿ ಒಂದು ಆಕೃತಿ ಒಳನುಗ್ಗಿತು. ಸ್ವಾಮೀಜಿಗಳು ನೋಟವನ್ನು ಬಲಗೊಳಿಸಲಾಗಿ, ಬಣ್ಣದ ಸೀರೆ ಉಟ್ಟು ಬಳುಕುತ್ತ ಬಂದ ಆ ಹೆಣ್ಣು ಕೈಯಲ್ಲೊಂದು ಫೈಲ್ ಹಿಡಿದಿತ್ತು. ದೂರದಿಂದಲೇ ಶ್ರೀಗಳಿಗೆ ನಮಸ್ಕರಿಸಿ, 'ಇಂದಿನ ಪತ್ರಿಕೆಯ ಜಾಹೀರಾತು ನೋಡಿದೆ ಸ್ವಾಮೀಜಿ, ನನಗೆ ಎಲ್ಲ ತರದ ಕನ್ನಡ ಟೈಪಿಂಗ್ ಬರುತ್ತೆ, ಹೂವುಗಳೆಂದರೆ ನನಗೆ ಪಂಚಪ್ರಾಣ' ಎಂದು ಕಣ್ಣು ಮಿಟುಕಿಸಿದಳು. ಶ್ರೀಗಳಿಗೆ ಉಸಿರು ನಿಂತ ಅನುಭವವಾಯಿತು.

**ಗುರುಪ್ರಸಾದ್ ಕಂಟಲಗೆರೆ**

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕತೆ ಕವಿತೆ ಆಸಕ್ತಿಯ ಕ್ಷೇತ್ರಗಳು. ಪ್ರಕಟಿತ ಪುಸ್ತಕಗಳು: 'ಗೋವಿನ ಜಾಡು' (ಕಥಾಸಂಕಲನ), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ). 2019ರ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಅವರ ಕತೆಗೆ ಮೊದಲ ಬಹುಮಾನ ಬಂದಿದೆ.